## ಬುತ್ತಿ ಚಿಗುರು

### ಉಡುಗೊರೆ

ಅಜನೀಶನ ಮದುವೆ. ಅವನ ಖಾಸಾ ದೋಸ್ತರು ಐವರು ಒಟ್ಟಿಗೆ ಬಂದು ಕೈ ಕುಲುಕಿದರು. ಅಜನೀಶ ಅವರ ಕೈ ನೋಡಿದ. ಪ್ರತಿಯೊಬ್ಬರ ಕೈಯಲ್ಲಿ ತಲಾ ಐದು ಕೇಜಿ ಆಶೀರ್ವಾದ ಗೋಧಿ ಹಿಟ್ಟಿನ ಪಾಕೆಟ್ ಇತ್ತು! 'ಏನ್ರಯ್ಯಾ ಇದು?' ಎಂದ ಬೇಸರ ಮತ್ತು ಆಶ್ಚರ್ಯದಿಂದ. ಖಾಸಾ ದೋಸ್ತರು ಲಗ್ನಪತ್ರಿಕೆ ತೋರಿಸಿ ಅವನ ಕೈಗೆ ಗೋಧಿಹಿಟ್ಟಿನ ಪಾಕೆಟ್ಟುಗಳನ್ನಿಟ್ಟರು. ಲಗ್ನಪತ್ರಿಕೆಯಲ್ಲಿ ಮೂಲೆಯಲ್ಲಿ ಕಂಡೂ ಕಾಣದಂತೆ ಬರೆಯಲಾಗಿತ್ತು. 'ಆಶೀರ್ವಾದವೇ ಉಡುಗೊರೆ' ಎಂದು!

**ಕೆ.ಶ್ರೀನಿವಾಸರಾವ್**



---

### ರಿಪೇರಿ

ಕಲ್ಲೇಶಿಯ ವಾಚ್ ಅಂಗಡಿ ನಗರದಲ್ಲಿಯೇ ಸಾಕಷ್ಟು ಪ್ರಸಿದ್ಧಿ ಪಡೆದಿತ್ತು. ಅದಕ್ಕೆ ಪ್ರಮುಖ ಕಾರಣ ಅವನು ನೀಡುತ್ತಿದ್ದ ಭಾರೀ ಆಫರ್‌ಗಳು. ಅವನ ಅಂಗಡಿಯಲ್ಲಿ ಕೊಂಡ ಎಲ್ಲಾ ತರಹದ ಗಡಿಯಾರಗಳಿಗೂ ಶೇಕಡಾ 50ರಷ್ಟು ರಿಯಾಯಿತಿ ನೀಡುತ್ತಿದ್ದ. ಗುಂಡನಿಗೆ ಅವನ ಮೇಲೆ ಅನುಮಾನ ಬಂದು ಹೋಗಿ ಕೇಳಿಯೇ ಬಿಟ್ಟ. 'ಅಲ್ಲಾ ಕಣ್ರೀ ಹೀಗೆ ರಿಯಾಯಿತಿ ದರದಲ್ಲಿ ಅರ್ಧದಷ್ಟು ಬೆಲೆಗೆ ಮಾರಾಟ ಮಾಡ್ತೀರಲ್ಲಾ ನಿಮಗೆ ನಷ್ಟ ಆಗುವುದಿಲ್ಲವೇ?' ಎಂದು. ಗುಂಡನ ಪ್ರಶ್ನೆಗೆ ಸ್ವಲ್ಪವೂ ವಿಚಲಿತವಾಗದೇ ಕಲ್ಲೇಶಿ ಉತ್ತರಿಸಿದ, 'ಯಾವುದೇ ನಷ್ಟವಿಲ್ಲ. ಯಾಕಂದ್ರೆ ನನ್ನ ಬಳಿ ಕೊಂಡು ಹೋದವರು ರಿಪೇರಿಗಾಗಿ ಮತ್ತೆ ನನ್ನ ಬಳಿಯೇ ವಾಪಸ್ ಬರುತ್ತಾರೆ. ನನಗೆ ಅದರಲ್ಲಿ ಗಡಿಯಾರದ ಮೌಲ್ಯದ ಎರಡುಪಟ್ಟು ಲಾಭವಾಗುತ್ತದೆ'. ಗುಂಡ ಮರುಮಾತಾಡದೇ ಹಿಂದಿರುಗಿದ...



**ಪ.ನಾ. ಹಳ್ಳಿ ಹರೀಶ್ ಕುಮಾರ್**